**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ  MVC-798/2022**

**ದಿನಾಂಕ 21-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಮಾನಪ್ಪ ರಾಜಾಪೂರ | RW1 |
| ತಂದೆಯ ಹೆಸರು | ಃ | ಮರೆಪ್ಪ | |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಲೀಗಲ್ ರಿಟೇನರ್ | |
| ವಾಸಸ್ಥಳ | ಃ | ಕಲ್ಬುರ್ಗಿ | |

**ಮುಖ್ಯ ವಿಚಾರಣೆಃ ಶ್ರೀ VCMP 2ನೇ ಎದುರುದಾರರ ಪರ ವಕೀಲರಿಂದಃ**

ಮುಖ್ಯ ವಿಚಾರಣೆ ಬದಲಾಗಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

2ನೇ ಎದುರುದಾರರ ಕಂಪನಿಯವರು ನನಗೆ ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್.1 ಎಂದು ಗುರುತಿಸಲಾಯಿತು.

ನಮ್ಮ ಕಂಪನಿ ವತಿಯಿಂದ ಹೊಂಡಾ ಶೈನ್ ಚಸ್ಸಿ ನಂ.ME4JC85AJMG015856 ವಾಹನಕ್ಕೆ ನೀಡಲಾದ ವಿಮೆ ಪಾಲಿಸಿ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್-2 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದ**

ಅಪಘಾತದ ದಿನ ದಂದು ನಮ್ಮ ಕಂಪನಿ ವತಿಯಿಂದ ಕೆಎ-32 ಹೆಚ್ ಬಿ 0036 ವಾಹನಕ್ಕೆ ನೀಡಲಾದ ವಿಮೆಪಾಲಿಸಿ ಜಾರಿಯಲ್ಲಿತ್ತು ಎಂದರೆ ನಿಜ. ಸದರಿ ವಿಮೆ 04-12-2021 ರಿಂದ ಮಧ್ಯರಾತ್ರಿ

03-12-2022 ವರೆಗೆ ಬಂಡಲ್ ಪಾಲಿಸಿ ಜಾರಿಯಲ್ಲಿತ್ತು ಎಂದರೆ ನಿಜ. ನಿಶಾನೆ ಆರ್-2ರ ಪಾಲಿಸಿ 04-12-2021 ರಿಂದ ಮಧ್ಯರಾತ್ರಿ 03-12-2026 ಅವಧಿವರೆಗೆ 3rd ಪಾರ್ಟಿ ಹೊಣೆಗಾರಿಕೆ ಒಳಗೊಂಡ ಪಾಲಿಸಿ ಆಗಿತ್ತು ಎಂದರೆ ನಿಜ.

ಅಪಘಾತದ ದಿನದಂದು ಸುಧಾಕರ್ ತಂದೆ ಭೀಮಯ್ಯರವರು ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿದ್ದರು ಎಂದರೆ ಸರಿಯಲ್ಲ. ಸುಧಾಕರ್ ತಂದೆ ಭೀಮಯ್ಯರವರು ವಾಹನ ಚಾಲನಾ ಪರವಾನಿಗೆ ಪತ್ರ ಇದ್ದರೂ ಸಹ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-21ರ ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿತ್ತು ಎಂದರೆ ಸರಿಯಲ್ಲ. ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿದ್ದರೂ ಸಹ ದಾಖಲೆ ಸುಳ್ಳಾಗಿದೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ನಮ್ಮ ಕಂಪನಿಯಿಂದ ಬಂಡಲ್ ಪಾಲಿಸಿ ನೀಡಿದ ಕಾರಣ ಪರಿಹಾರ ಧನ ನೀಡಬೇಕಾಗುತ್ತದೆ ಎಂದು ಭಾವಿಸಿ ಕಂಪನಿ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕಂಪನಿ ಪರಿಹಾರಧನ ನೀಡುವ ಬಾದ್ಯತೆಯಿಂದ ತಪ್ಪಿ ಸಿಕೊಳ್ಳುವ ಉದ್ದೇಶದಿಂದ ಪೊಲೀಸರು ನಾವು ವಿಮೆ ಮಾಡಿಸಿದ ವಾಹನದ ಮೇಲೆ ದೋಷಾರೋಪಣೆ ಪಟ್ಟಿ ಸಲ್ಲಿಸಿಲ್ಲ ಅಂತಾ ಹೇಳಿ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ